# ಉಪ-ತಹಶೀಲ್ದಾರರು, ನಾಡಕಾರ್ಯಾಲಯ, ತೆಕ್ಕಲಕೋಟೆ.
## ಇವರ ನ್ಯಾಯಾಲಯದಲ್ಲಿ

| ವಾದಿಗಳು: | ವಿರುದ್ಧ: | ಪ್ರತಿವಾದಿಗಳು |
|---|---|---|
| ವೈ.ಓಂಕಾರ<br>ತಂದೆ: ದಿ॥ ವೈ.ಗುರುಪಾದಪ್ಪ<br>ಮೊಪ್ಪನಾಳು ಗ್ರಾಮ. | | ಉಪ್ಪಾರು ಹನುಮಂತಪ್ಪ<br>ತಂದೆ: ಗರ್ಜಣ್ಣ<br>20ನೇ ವಾರ್ಡ್, ಬಿ.ಡಿ.ಸಿ.ಸಿ<br>ಬ್ಯಾಂಕ್ ಹತ್ತಿರ, ಸಿರುಗುಪ್ಪ. |

** ** **

| ಕ್ರ.ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರು | ವಿಸ್ತೀರ್ಣ: | ತರಂ |
|---|---|---|---|---|---|---|
| 01 | ಸಿರುಗುಪ್ಪ | ತೆಕ್ಕಲಕೋಟೆ | ಮೊಪ್ಪನಾಳು | 74/4 | 0-30 | - |

**ಪೀಠಿಕೆ** :-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ಮೊಪ್ಪನಹಾಳು ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಉಪನೊಂದಣಾಧಿಕಾರಿಗಳು, ಸಿರುಗುಪ್ಪದಲ್ಲಿ ಡಾಕುಮೆಂಟ್ ನಂಬರ 5490/2015-16 ದಿನಾಂಕ: 16-11-2015ರ ಪ್ರಕಾರ ನೊಂದಾಯಿತವಾದ ದಸ್ತಾವೇಜನ್ನು ದಿನಾಂಕ: 20-11-2015 ರಂದು ತಾಲೂಕು ಕಛೇರಿ ಭೂಮಿ ಕೇಂದ್ರದಲ್ಲಿ ನಮೂನೆ- 21 ನೋಟೀಸ್ ತಯಾರಿಸಿ ಹಕ್ಕು ಬದಲಾವಣೆ ಪ್ರಕ್ರಿಯೆ ಜರುಗಿಸಲು ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಿ ಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟಿಸು ಜಾರಿ ಮಾಡಿರುವ ಸಮಯದಲ್ಲಿ ಆಸಕ್ತಿ ವುಳ್ಳವರಿಂದ ನಿಗದಿತ ಅವಧಿಯೊಳಗಾಗಿ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರು ಈ ಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದ್ರಿ ವಿವಾದಾಸ್ಪದ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ಪ್ರಕರಣದ ವಹಿಯಲ್ಲಿ ನಮೂದಿಸಿ ಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ ವಿಚಾರಣೆ ಮಾಡಿ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಯಿತು.

ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ, ವಾದಿಗಳು ಸದ್ರಿ ಜಮೀನು ನಮ್ಮ ಪೂರ್ವಜರ ಹೆಸರಿನಲ್ಲಿ ಇದ್ದು ಬೇರೆ ಜಮೀನುಗಳಿಗೆ ಸಂಬಂಧಿಸಿದಂತೆ ತಾಲೂಕು ಕಛೇರಿ ಭೂಮಿ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿದ್ದು, ಸದ್ರಿ ಜಮೀನುಗಳು ಹಕ್ಕು ಬದಲಾವಣೆ ಆಗುವವರೆಗೂ ಈ ಜಮೀನನ್ನು ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ, ಆದರೆ ಗ್ರಾಮದ ಹಿರಿಯರ ಸಮಕ್ಷಮ ನಮ್ಮ ಸಮಸ್ಯೆಗಳನ್ನು ಬಗೆಹರಿಸಿ ಕೊಂಡಿದ್ದು ನನ್ನ ತಕರಾರನ್ನು ಹಿಂಪಡೆಯುವುದಾಗಿ ರೂಪಾಯಿ 20ರೂ. ಛಾಪಾ ಕಾಗದದ ಮೇಲೆ ತಕರಾರನ್ನು ಹಿಂಪಡೆದಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ, ಪ್ರತಿವಾದಿಗಳು ವಿಚಾರಣೆ ಸಮಯದಲ್ಲಿ ನೊಂದಾಯಿತ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿವಾದಾಸ್ಪದ ಪ್ರಕರಣದ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದಿ ಮತ್ತು ಪ್ರತಿವಾದಿಗಳ ವಾದಗಳನ್ನು ಆಲಿಸಲಾಗಿ ವಾದಿಗಳು ತಮ್ಮ ತಕರಾರನ್ನು ಹಿಂಪಡೆಯುವುದಾಗಿ ರೂ.20/- ರೂ ಛಾಪಾಕಾಗದದ ಮೇಲೆ ಒಪ್ಪಿಗೆ ನೀಡಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಸದ್ರಿ ಪ್ರಕರಣವು ನೊಂದಾಯಿತಿ ದಸ್ತಾವೇಜು ಆಗಿರುವುದರಿಂದ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ. 128 ಮತ್ತು 129 ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

## ಆ ದೇ ಶ

ಸಂ:ಕಂ:ಹ.ಬ.:ವಿವಾದ: 87 :2015-16 ದಿನಾಂಕ: 12-07-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಹೋಬಳಿ, ಪೊಪ್ಪನಾಳು ಗ್ರಾಮದ ಸರ್ವೆನಂ.74/4 (ಬಿ) 0-30ಸೆಂಟ್ಸ್ ಜಮೀನನ್ನು ಡಾಕುಮೆಂಟ್ ನಂಬರ್ 5490/2015-16 ದಿನಾಂಕ: 16-11-2015ರ ಪ್ರಕಾರ ವಿಕ್ರಯದಾರರ ಹೆಸರನ್ನು ಕಡಿಮೆ ಮಾಡಿ ಕ್ರಯದಾರರ ಹೆಸರಿಗೆ ಹಕ್ಕು ಬದಲವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ಬೆರಳಚ್ಚು ಮಾಡಿಸಿ ಓದಿ ತಪ್ಪುಗಳನ್ನು ತಿದ್ದಿ ಸರಿಪಡಿಸಿ ದಿನಾಂಕ: 12-07-16 ಬಹಿರಂಗವಾಗಿ ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡಕಾರ್ಯಾಲಯ
ತೆಕ್ಕಲಕೋಟೆ.

ಪ್ರತಿಯನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ,
2) ಭೂಮಿ ಕೇಂದ್ರ, ತಾಲೂಕು ಕಛೇರಿಗೆ.